# ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

# UNIVERSITY OF AGRICULTURAL AND HORTICULTURAL SCIENCES, SHIVAMOGGA


ಡಾ.ಪಿ. ನಾರಾಯಣಸ್ವಾಮಿ
ಕುಲಸಚಿವರು
ಮೊಬೈಲ್ : 9480838958
ಇ-ಮೇಲ್: registrarshimoga@gmail.com

ಕುಲಸಚಿವರ ಕಛೇರಿ
ಕೃ.ತೋ.ವಿ.ವಿ., ಶಿವಮೊಗ್ಗ
ಕರ್ನಾಟಕ-577 204
ಫ್ಯಾಕ್ಸ್: 08182-298008/267011


---

ಸಂಖ್ಯೆ:ಕೃತೋವಿವಿ(ಶಿ)/ಕು.ಸ./ಡಿಪ್ಲೊಮಾ(ಕೃಷಿ) ಪ್ರವೇಶ/436 /2019-20 ದಿನಾಂಕ : 11-05-2019

## ಅಧಿಸೂಚನೆ

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿ 2019-20 ನೇ ಸಾಲಿಗೆ ಎರಡು ವರ್ಷಗಳ (4 ಸೆಮಿಸ್ಟರ್) ಅವಧಿಯ ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ ನಿಗದ್ಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಈ ಕೆಳಗೆ ನಮೂದಿಸಿದ ಆವರಣಗಳಲ್ಲಿ ಕೋರ್ಸ್‌ಅನ್ನು ಬೋಧಿಸಲಾಗುತ್ತದೆ.

| ಕ್ರಸಂ. | ಆವರಣ | ಸೀಟುಗಳ ಸಂಖ್ಯೆ |
|---|---|---|
| 1. | ಕೃಷಿ ಡಿಪ್ಲೊಮಾ ಮಹಾವಿದ್ಯಾಲಯ, ಕತ್ತಲಗೆರೆಗೆ, ದಾವಣಗೆರೆ ಜಿಲ್ಲೆ | 35 |
| 2. | ಕೃಷಿ ಡಿಪ್ಲೊಮಾ ಮಹಾವಿದ್ಯಾಲಯ, ಬ್ರಹ್ಮಾವರ, ಉಡುಪಿ ಜಿಲ್ಲೆ | 35 |

**ಬೋಧನಾ ಕ್ರಮ ಮತ್ತು ಮಾಧ್ಯಮ:** ಡಿಪ್ಲೊಮಾ (ಕೃಷಿ)ಯನ್ನು ಕನ್ನಡ ಮಾಧ್ಯಮದಲ್ಲಿ ಸೆಮಿಸ್ಟರ್ ಪದ್ಧತಿಯಲ್ಲಿ ಬೋಧಿಸಲಾಗುವುದು.

**ಅವಧಿ:** ಎರಡು ವರ್ಷ (ನಾಲ್ಕು ಸೆಮಿಸ್ಟರ್)

**ಪ್ರವೇಶ ಅರ್ಹತೆ:**

1. ವಿಶ್ವವಿದ್ಯಾಲಯದಲ್ಲಿ ಡಿಪ್ಲೊಮಾ (ಕೃಷಿ) ಕೋರ್ಸಗೆ ಪ್ರವೇಶ ಕೋರುವ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಪಠ್ಯವನ್ನು ಭಾಷೆಯಾಗಿ ಅಭ್ಯಸಿಸಿ ಕನಿಷ್ಠ ಶೇ. 45 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.
2. ದಿನಾಂಕ 21-06-2019 ರಂದು ಅಭ್ಯರ್ಥಿಗಳ ವಯಸ್ಸು 19 ವರ್ಷಗಳನ್ನು ಮೀರಿರಬಾರದು.
3. ಎರಡು ವರ್ಷದ ಡಿಪ್ಲೊಮಾ (ಕೃಷಿ) ಕೋರ್ಸಗೆ ಪ್ರವೇಶ ಪಡೆಯುವ ಅಭ್ಯರ್ಥಿಗಳಲ್ಲಿ ಸರ್ಕಾರವು ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ. 40 ರಷ್ಟು ಮೀಸಲಾತಿಯನ್ನು ಘೋಷಿಸಿದೆ. (ಸರ್ಕಾರ ಆದೇಶ ಸಂಖ್ಯೆ: ಕೃಇ 22 ಕೃವಿವಿ 2014 ಬೆಂಗಳೂರು, ದಿನಾಂಕ: 05-07-2014).

ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿ ಹಾಗೂ ವಿವರಣಾ ಪುಸ್ತಕಗಳನ್ನು ದಿನಾಂಕ 27-05-2019 ರಿಂದ ದಿನಾಂಕ 14-06-2019 ರವರೆಗೆ (5.00 ಗಂಟೆಗೆ) ಖುದ್ದಾಗಿ ಅಥವಾ ಅಂಚೆ ಮೂಲಕ ಕುಲಸಚಿವರ ಕಛೇರಿ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ಅಥವಾ ಡಿಪ್ಲೊಮಾ (ಕೃಷಿ) ಮಹಾವಿದ್ಯಾಲಯ, ಕತ್ತಲಗೆರೆ / ಬ್ರಹ್ಮಾವರ, ಇವರಲ್ಲಿ ಪಡೆಯಬಹುದು.

**ಅರ್ಜಿ ಹಾಗೂ ವಿವರಣಾ ಪತ್ರಗಳ ಶುಲ್ಕ:**

- ➢ ಸಾಮಾನ್ಯ ವರ್ಗದವರಿಗೆ ರೂ. 400/-, ಎಸ್.ಸಿ./ಎಸ್.ಟಿ/ಪ್ರವರ್ಗ-1 ರವರಿಗೆ ರೂ. 200/- ಆಗಿದ್ದು ಡಿಡಿಯನ್ನು "ಹಣಕಾಸು ನಿಯಂತ್ರಣಾಧಿಕಾರಿಗಳು, ಕೃ.ತೋ.ವಿ.ವಿ. ಶಿವಮೊಗ್ಗ" (Comptroller, UAHS, Shivamogga) ಇವರ ಹೆಸರಿನಲ್ಲಿ ಪಡೆದು ಅರ್ಜಿಯನ್ನು ಪಡೆಯಬಹುದು.
- ➢ ಅರ್ಜಿ ಹಾಗೂ ವಿವರಣಾ ಪುಸ್ತಕವನ್ನು ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ವೆಬ್‌ಸೈಟ್ uahs.edu.in ದಿನಾಂಕ 27/05/2019 ರಿಂದ 14/06/2019 ರವರೆಗೆ ಡೌನ್‌ಲೋಡ್ ಮಾಡಬಹುದು. ಈ ರೀತಿ ವೆಬ್ ಸೈಟ್ ಮುಖಾಂತರ ಪಡೆದು ಭರ್ತಿ ಮಾಡಿದ ಅರ್ಜಿಗಳೊಂದಿಗೆ, ಅರ್ಜಿಯ ನಿಗದಿತ ಶುಲ್ಕವನ್ನು ಡಿಡಿ ರೂಪದಲ್ಲಿ ಲಗತ್ತಿಸಿ ಕಳುಹಿಸಿಕೊಡಬೇಕು.
- ➢ ಎಲ್ಲಾ ಅಗತ್ಯ ದೃಢೀಕೃತ(Attested) ಅಡಕಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಕುಲಸಚಿವರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ಅಥವಾ ಪ್ರಾಂಶುಪಾಲರು, ಡಿಪ್ಲೊಮಾ (ಕೃಷಿ) ಮಹಾವಿದ್ಯಾಲಯ ಕತ್ತಲಗೆರೆ / ಬ್ರಹ್ಮಾವರ ಇಲ್ಲಿಗೆ ದಿನಾಂಕ 21-06-2019 (5-00 ಗಂಟೆಗೆ) ಒಳಗೆ ತಲುಪುವಂತೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದು, ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ➢ ಮೂಲ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಇಲ್ಲದ ಅಭ್ಯರ್ಥಿಗಳು, ಅಂತರ್ಜಾಲ ಅಂಕಪಟ್ಟಿ ಪ್ರತಿಯನ್ನು ಅಥವಾ ತಾತ್ಕಾಲಿಕ ಅಂಕಪಟ್ಟಿ ಪ್ರತಿಯನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಂದ ದೃಢೀಕರಿಸಿ ಲಗತ್ತಿಸತಕ್ಕದ್ದು.
- ➢ ದಿನಾಂಕ 14-06-2019 ರ ಮುಂಚಿತವಾಗಿ ಡಿಡಿಯನ್ನು ಪಡೆದಿರಬೇಕು. ನಂತರ, ಪಡೆದ ಡಿಡಿಯೊಂದಿಗೆ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಪ್ರವೇಶ ಆಯ್ಕೆ ವಿಧಾನ:**

- ❖ ಸರ್ಕಾರದ ಆದೇಶಗಳ ಅನ್ವಯ ಸೀಟುಗಳನ್ನು ಭರ್ತಿ ಮಾಡಲಾಗುವುದು.
- ❖ ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ವಿದ್ಯಾರ್ಥಿಗಳ ಆಯ್ಕೆಗನುಗುಣವಾಗಿ, ರೋಸ್ಟರ್ ಪದ್ಧತಿಯನ್ನು ಅಳವಡಿಸಿ, ಮೂಲ ದಾಖಲಾತಿಗಳನ್ನು ಪರೀಶೀಲಿಸಿ, ಕೌನ್ಸೆಲಿಂಗ್ ಮುಖಾಂತರ ಪ್ರವೇಶಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ದಾಖಲಾತಿ ನೀಡಲಾಗುವುದು. ವಿದ್ಯಾರ್ಥಿಗಳಿಗೆ ದಿನಾಂಕ 22-07-2019 ರಿಂದ ತರಗತಿ ಪ್ರಾರಂಭಿಸಲಾಗುವುದು.

ಆದೇಶದ ಮೇರೆಗೆ

ಕುಲಸಚಿವರು
ಕುಲಸಚಿವರು
ಕೃಷಿ ಮತ್ತು ತೋಟಗಾರಿಕೆ
ವಿಶ್ವವಿದ್ಯಾಲಯ, ಶಿವಮೊಗ್ಗ-577 204

**ಪ್ರತಿಯನ್ನು,**

1. ಶಿಕ್ಷಣ ನಿರ್ದೇಶಕರು, ಕೃ.ತೋ.ವಿ.ವಿ., ಶಿವಮೊಗ್ಗ
2. ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಶಿವಮೊಗ್ಗ
3. ಡೀನ್ (ವಿದ್ಯಾರ್ಥಿ ಕಲ್ಯಾಣ), ಕೃ.ತೋ.ವಿ.ವಿ., ಶಿವಮೊಗ್ಗ
4. ಪ್ರಾಂಶುಪಾಲರು, ಡಿಪ್ಲೊಮಾ (ಕೃಷಿ) ಮಹಾವಿದ್ಯಾಲಯ, ಕತ್ತಲಗೆರೆ / ಬ್ರಹ್ಮಾವರ
5. ಕಾರ್ಯದರ್ಶಿಗಳು, ಕುಲಪತಿಗಳು, ಕೃ.ತೋ.ವಿ.ವಿ., ಶಿವಮೊಗ್ಗ ಇವರ ಮಾಹಿತಿಗಾಗಿ.
6. ಕಛೇರಿ ಕಡತ